# KANNADA

## (Second Language)

***Maximum Marks : 80***

***Time Allowed : Three Hours***

1. *Answers to this Paper must be written on the paper provided separately.*
2. *You will **not** be allowed to write during the first **15** minutes.*
3. *This time is to be spent in reading the question paper.*
4. ***The time given at the head of this Paper is the time allowed for writing the answers.***

5. *This paper comprises two Sections; **Section A** and **Section B.***
6. *Attempt **all** the questions from **Section A**.*
7. *Attempt **four** questions from **Section B**, answering at least **one** question each from the **two** books you have studied and **any two** other questions from the same books that you have compulsorily chosen.*
8. *The intended marks for questions or parts of questions are given in brackets [ ].*

***Instruction for the Supervising Examiner***

*Kindly read aloud the instructions given above to all the candidates present in the Examination Hall.*

Downloaded From www.icseboard.org

## SECTION—A (40 Marks)

*Attempt **all** questions from this section.*

### Question 1

Write a short composition in **Kannada** of approximately **250** words on any **one** of the following topics :— [15]

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಸುಮಾರು 250 ಪದಗಳ ಸಂಕ್ಷಿಪ್ತ ಪ್ರಬಂಧ ಬರೆಯಿರಿ :—

(i) ಕಣ್ಣಿಗೆ ಕಾಣುವ ದೇವರು ಎಂದರೆ, ಪೋಷಕರು, ನಮ್ಮ ಜೀವನದಲ್ಲಿ ಅವರ ಪಾತ್ರ ಎಷ್ಟು ಮುಖ್ಯ ಎಂಬುದನ್ನು ನಿಮ್ಮ ಅನುಭವದ ಮಾತುಗಳಲ್ಲಿ ವಿವರಿಸಿ.

(ii) "ನನ್ನ ತಾಳ್ಮೆ ನನ್ನನ್ನು ದೊಡ್ಡ ಆಪತ್ತಿನಿಂದ ರಕ್ಷಿಸಿತು". ಎಂಬ ವಾಕ್ಯದೊಡನೆ ಮುಕ್ತಾಯವಾಗುವ ಒಂದು ಘಟನೆಯನ್ನು ವಿವರಿಸಿ.

(iii) "ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ" — ಈ ಗಾದೆ ಮಾತಿನ ಅರ್ಥವನ್ನು ವಿವರಿಸಿ ಅಥವಾ ಈ ಗಾದೆ ಮಾತನ್ನು ಆಧರಿಸಿ ಒಂದು ಕಥೆಯನ್ನು ಬರೆಯಿರಿ.

(iv) ಇತ್ತೀಚೆಗೆ ಸಾಮಾಜಿಕ ಜಾಲತಾಣಗಳು ತುಂಬಾ ಪ್ರವರ್ಧಮಾನಕ್ಕೆ ಬೆಳೆದು ನಿಂತಿದ್ದು, ಇವು ಯುವ ಜನಾಂಗದ ಮೇಲೆ ಬೀರಿರುವ ಪ್ರಭಾವಗಳು, ಉಂಟಾಗುತ್ತಿರುವ ಪರಿಣಾಮಗಳ ಬಗ್ಗೆ ವಿವರಿಸುತ್ತಾ, ಇವುಗಳನ್ನು ನಮ್ಮ ಯುವ ಜನತೆ ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು ? ಎಂಬುದನ್ನು ತಿಳಿಸಿ.

(v) ಈ ಕೆಳಗೆ ಕೊಟ್ಟಿರುವ ಚಿತ್ರವನ್ನು ಗಮನಿಸಿ, ಅಧ್ಯಯನ ಮಾಡಿ, ಈ ಚಿತ್ರವನ್ನು ಆಧರಿಸಿ ಒಂದು ಕಥೆ ಅಥವಾ ಒಂದು ಸಂಕ್ಷಿಪ್ತವಾದ ಪ್ರಬಂಧವನ್ನು ಬರೆಯಿರಿ. ಒಟ್ಟಾರೆ ಚಿತ್ರಕ್ಕೂ ನಿಮ್ಮ ವರ್ಣನೆಗೂ ಸ್ಪಷ್ಟವಾದ ಮತ್ತು ನೇರವಾದ ಸಂಬಂಧವಿರಬೇಕು.



Downloaded From www.icseboard.org

## Question 2

Write a letter in **Kannada** in approximately **120** words on any **one** of the topics given below :— [7]

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನು– ಆರಿಸಿಕೊಂಡು ಸುಮಾರು 120 ಪದಗಳಲ್ಲಿ ಒಂದು ಪತ್ರವನು–ಬರೆಯಿರಿ :—

(i) ಒಂದು ದಿನ ನೀವು ಶಾಲೆಗೆ ತಡವಾಗಿ ಹೋದಾಗ, ನಿಮ್ಮನು–ಒಳಗೆ ಬಿಡಲಿಲ್ಲವೆಂದು ಬೇಸರವಾಯಿತು. ಆಗ ನಿಮ್ಮ ಭಾವನೆಗಳೇನು ? ನೀವು ಏನು ಮಾಡಿದಿರಿ ? ವಿವರಿಸುತ್ತಾ ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

(ii) ನಿಮ್ಮ ಬಡಾವಣೆಯಲ್ಲಿ ಕಸ ಮತ್ತು ಮಣ್ಣಿನಿಂದ ಒಳಚರಂಡಿಗಳು ತುಂಬಿದ್ದು, ಮಳೆಗಾಲದಲ್ಲಿ ನೀರು ಚರಂಡಿಯಲ್ಲಿ ಹೋಗದೆ ರಸ್ತೆ ಮೇಲೆ ಹರಿಯುವುದರಿಂದ ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಗುತ್ತಿದೆ ಎಂದು ತಿಳಿಸಿ ಚರಂಡಿಗಳ ಸ್ವಚ್ಛತೆಗಾಗಿ ಮನವಿ ಮಾಡಿ ಮಹಾನಗರ ಪಾಲಿಕೆಯ ಆಯುಕ್ತರಿಗೆ ಒಂದು ಮನವಿ ಪತ್ರ ಬರೆಯಿರಿ.

## Question 3

Read the passage given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನು–ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರ ಬರೆಯಿರಿ :—

ಬಹಳ ಹಿಂದೆ ಶಿವಪುರವೆಂಬ ಊರಿನಲ್ಲಿ ರಾಮಪ್ಪನೆಂಬ ಶ್ರೀಮಂತನಿದ್ದನು. ಅವನು ಬಡವರಿಗೆ ಸಹಾಯವನು–ಮಾಡದೇ, ಇತರರು ಮಾಡಿದ ಸಹಾಯವನು–ತನದೆಂದೇ ಹೇಳುತ್ತಾ, ತನ–ದೊಡ್ಡಸ್ತಿಕೆಯನು–ಕೊಚ್ಚಿಕೊಳ್ಳುತ್ತಿದ್ದನು. ಅವನ ಮನೆಯ ಸಮೀಪದಲ್ಲಿ ಧರ್ಮಯ್ಯನೆಂಬ ಬಡವನು ವಾಸವಾಗಿದ್ದನು. ಅವನು ಇತರರಿಗೆ ತನ–ಕೈಲಾದ ಸಹಾಯವನು–ಮಾಡುತ್ತಿದ್ದನು. ಆಗ ಶ್ರೀಮಂತ ರಾಮಪ್ಪನು "ತಾನು ಧರ್ಮಯ್ಯನ ಮೂಲಕ ಸಹಾಯವನು– ಮಾಡಿಸುತ್ತಿರುವುದಾಗಿ ಜಂಬವನು– ಕೊಚ್ಚಿಕೊಳ್ಳುತ್ತಿದ್ದನು." ಹೀಗೆಯೇ ಇದು ನಡೆದಾಗ ಧರ್ಮಯ್ಯನು ನಕ್ಕು ಸುಮ್ಮನಾಗುತ್ತಿದ್ದನು.

ಆ ಊರಿನ ಹತ್ತಿರದ ಒಂದು ಗುಡ್ಡದಲ್ಲಿ ಒಬ್ಬ ಸಾಧುವು ವಾಸವಾಗಿದ್ದನು. ಆತನು ಜನರ ಕಣ್ಣಿಗೆ ಹೆಚ್ಚಾಗಿ ಬೀಳುತ್ತಿರಲ್ಲಿಲ್ಲ. ಒಂದು ದಿನ ಆ ಊರಿಗೆ ಬಂದ ಸಾಧು, ಶ್ರೀಮಂತ ರಾಮಪ್ಪನ ಮನೆಗೆ ಬಂದು "ಅಯ್ಯಾ, ಏನಾದರೂ ಸಹಾಯ ಮಾಡಿ ನೀವು ಕೊಟ್ಟಿದ್ದು ನಿಮಗೇ! ಎಂದು ಬೇಡಿದಾಗ, ಕೋಪಗೊಂಡು, ಸಾಧುವನು–ಬೈಯುತ್ತಾ ಒಂದು ಹರಕಲು ಬಟ್ಟೆಯನು–ಸಾಧುವಿಗೆ ಎಸೆದನು. ಆಗ ಆತನು ನಾನೊಬ್ಬ ಸಾಧು, ನಿಮ್ಮ ವಸ್ತುಗಳು ನಮಗೇಕೆ ? ನೀವು ಕೊಟ್ಟಿದ್ದು ನಿಮಗೇ ಎಂದು ನುಡಿದು ಹೊರಟು ಹೋದನು. ನಂತರ ಧರ್ಮಯ್ಯನ ಮನೆಗೆ ಹೋಗಿ ಕೇಳಿದಾಗ, ಆತನು ಸಾಧುವಿಗೆ ಒಂದಷ್ಟು ದವಸ, ಧಾನ್ಯ ಹಾಗೂ ಕಂಬಳಿಯನು–ಕೊಟ್ಟು ಕಳುಹಿಸಿದನು. ಹೀಗೆಯೇ ಆ ಊರಿನ ಎಲ್ಲಾ ಮನೆಗಳಿಗೂ ಹೋಗಿ ಏನಾದರೂ ಸಹಾಯ ಮಾಡಿ ನೀವು ಕೊಟ್ಟಿದ್ದು ನಿಮಗೇ!" ಎಂದು ಹೇಳುತ್ತಾ, ಪ್ರತಿ ಮನೆಯಿಂದಲೂ ಏನಾನಾದರೂ ತೆಗೆದುಕೊಂಡು ಹೋದನು. ಸಾಧುವಿನ ಈ ಮಾತುಗಳನು–ಕೇಳಿ ಜನರಿಗೆ ಆಶ್ಚರ್ಯವಾಯಿತು.

ನಾಲ್ಕೈದು ದಿನಗಳು ಕಳೆದ ನಂತರ ಆ ಊರಿನಲ್ಲಿ ಹಿಂದೆಂದೂ ಕಾಣದ 'ಮಾಯದಂಥ ಮಳೆ' ಬಂದು ಮನೆ ದನಕರುಗಳು ಕೊಚ್ಚಿ ಹೋದವು ಜನರು ತಮ್ಮ ಪ್ರಾಣ ರಕ್ಷಣೆಗಾಗಿ ದೇವರನು–ಪ್ರಾರ್ಥಿಸುತ್ತಿರುವಾಗ ಆ ಸಾಧುವು ಬಂದು ಆ ಊರಿನ ಜನರನು–ಬೆಟ್ಟದ ಮೇಲಿರುವ ತನ–ಗುಡಿಸಲಿಗೆ ಕರೆದೊಯ್ದನು. ಶ್ರೀಮಂತ

Downloaded From www.icseboard.org

ರಾಮಪ್ಪ, ಧರ್ಮಯ್ಯನು ಸಹ ಅಲ್ಲಿಗೆ ಹೋದರು. ಸಾಧುವಿದ್ದ ಗುಡ್ಡದ ಮೇಲೆ ಮಳೆ ಇರಲಿಲ್ಲ. ತನ–ಗುಡಿಸಲಿನಲ್ಲಿ ಆಶ್ರಯವನು–ಕೊಟ್ಟ ಸಾಧು ಜನರಿಗೆ "ನೀವು ನನಗೆ ಕೊಟ್ಟ ಎಲ್ಲಾ ವಸ್ತುಗಳು ಇಲ್ಲಿವೆ, ಅವುಗಳನು–ನೀವೇ ಉಪಯೋಗಿಸಿಕೊಳ್ಳಿ ಎಂದಾಗ ಜನರು ತಮ್ಮ ತಮ್ಮ ವಸ್ತುಗಳನು– ಆಯ್ದು ಉಪಯೋಗಿಸಿಕೊಳ್ಳತೊಡಗಿದರು. ಶ್ರೀಮಂತ ರಾಮಪ್ಪನಿಗೆ ಅವನೇ ಕೊಟ್ಟಿದ್ದ ಹರಕಲು ಬಟ್ಟೆ ದೊರಕಿತು. ಆಗ ಧರ್ಮಯ್ಯನು ತನ–ಒಂದು ಕಂಬಳಿಯನು–ಕೊಟ್ಟಾಗ ಅವನಿಗೆ ನಾಚಿಕೆಯಾಯಿತು. ಒಂದು ವಾರದ ನಂತರ ಮಳೆಯು ತಗ್ಗಿತು, ಊರಿನ ಜನರು ಸಾಧುವಿಗೆ ವಂದಿಸಿ ಹೊರಡಲು ತಯಾರಾದಾಗ "ಭಗವಂತನು ನೀವು ಕೊಟ್ಟಿದ್ದನು–ನಿಮಗೇ ಕೊಡುತ್ತಾನೆ. ನೀವು ಮಾಡಿದ ಸಹಾಯವು ನಿಮ್ಮನು–ಕಷ್ಟಕಾಲದಲ್ಲಿ ಕಾಪಾಡುತ್ತದೆ" ಎಂದು ಹೇಳಿದಾಗ, ಅಂದಿನಿಂದ ರಾಮಪ್ಪನಿಗೆ ತನ– ತಪ್ಪಿನ ಅರಿವಾಗಿ, ತನ– ವರ್ತನೆಯನು–ಬದಲಾಯಿಸಿಕೊಂಡು ಉಪಕಾರಿಯಾಗಿ ಬಾಳಿದನು.

ಪ್ರಶೆಗಳು :—

(i) ಧರ್ಮಯ್ಯನು ಯಾರು ? ಈತನು ಮಾಡುತ್ತಿದ್ದ ಸಹಾಯವನು–ಕೊಚ್ಚೆಕೊಳ್ಳುತ್ತಿದ್ದವರು ಯಾರು ? ಏಕೆ ? [2]

(ii) ಸಾಧುವು ವಾಸವಾಗಿದ್ದುದು ಎಲ್ಲಿ ? ಊರಿಗೆ ಬಂದ ಸಾಧುವು ಏನೆಂದು ಬೇಡಿದನು ? [2]

(iii) ಊರಿನ ಜನರು ದೇವರನು–ಪ್ರಾರ್ಥಿಸಲು ಕಾರಣವೇನು ? ಸಾಧುವು ಜನರಿಗೆ ಹೇಗೆ ಸಾಹಾಯ ಮಾಡಿದನು ? [2]

(iv) ಗುಡಿಸಲಿನಲ್ಲಿ ರಾಮಪ್ಪನಿಗೆ ದೊರೆತ ವಸ್ತು ಯಾವುದು ? ಏಕೆ ? [2]

(v) ಈ ಗದ್ಯಭಾಗದಿಂದ ನೀವು ಕಲಿತ ನೀತಿಪಾಠವೇನು ? [2]

## Question 4

Read the questions and choose the correct answer from the options given :— [8]

ಸರಿಯಾದ ಉತ್ತರವನು–ಆರಿಸಿ ಬರೆಯಿರಿ :—

(i) 'ಪರೋಪಕಾರ' ----- ಪದದ ಸಮಾನಾರ್ಥಕ ಪದ.

(a) ಸೋಲು

(b) ಪರಾಭವ

(c) ಉಪಕಾರ

(d) ಪರಾಜಯ

(ii) 'ದುರ್ಬಲ' – ಈ ಪದದ ವಿರುದ್ಧಾರ್ಥಕ ಪದ.

(a) ಬಲಹೀನ

(b) ಬಲ

(c) ಸಬಲ

(d) ಬಲವಂತ

Downloaded From www.icseboard.org

(iii) ಸರಿಯಾದ ವಾಕ್ಯವನು-ಗುರುತಿಸಿ.

(a) ಮಕ್ಕಳು ಮೈದಾನದಲ್ಲಿ ಅತ್ಯುತ್ತಮವಾಗಿ ಆಡಿದರು

(b) ಮೈದಾನದಲ್ಲಿ ಅತ್ಯುತ್ತಮವಾಗಿ ಆಡಿದರು ಮಕ್ಕಳು

(c) ಮಕ್ಕಳು ಮೈದಾನದಲ್ಲಿ ಆಡಿದರು ಅತ್ಯುತ್ತಮವಾಗಿ

(d) ಅತ್ಯುತ್ತಮವಾಗಿ ಮಕ್ಕಳು ಮೈದಾನದಲ್ಲಿ ಆಡಿದರು

(iv) 'ಆಟಗಾರ' – ಈ ಪದದ ಅನ್ಯಲಿಂಗ ರೂಪ.

(a) ಆಟಗಾರಿ

(b) ಆಟಗಾರರು

(c) ಆಟಗಾರತಿಯರು

(d) ಆಟಗಾರ್ತಿ

(v) 'ಕಲೆಗಾರ' – ಈ ಪದದ ಬಹುವಚನ ರೂಪ.

(a) ಕಲೆಗಾರರು

(b) ಕಲಾಗಾತ್ರಿ

(c) ಕಲೆಗಾರಗಳು

(d) ಕಲೆಗಾರಂದಿರು

(vi) ನನ-ತಂದೆಯು ಸುಗಮ ಸಂಗೀತ <u>ಹಾಡಿದರು.</u> – ಗೆರೆ ಎಳೆದ ಪದದಲ್ಲಿರುವ ಕಾಲವನು-ಗುರುತಿಸಿ ಬರೆಯಿರಿ.

(a) ಭೂತಕಾಲ

(b) ವಸಂತಕಾಲ

(c) ವರ್ತಮಾನ ಕಾಲ

(d) ಭವಿಷ್ಯತ್ಕಾಲ

(vii) ಸೂಕ್ತ ವಿಭಕ್ತಿ ಪ್ರತ್ಯಯಗಳನು-ಆರಿಸಿ ವಾಕ್ಯವನು-ಪೂರ್ಣಗೊಳಿಸಿ.

ಮಕ್ಕಳು ಶಾಲೆ ----- ಆಟದ ಮೈದಾನ ------ ಆಡುತ್ತಿದ್ದಾರೆ.

(a) ಯಲ್ಲಿ, ದಲ್ಲಿ

(b) ಯ, ದಿಂದ

(c) ವನು-ಯಲ್ಲಿ

(d) ಯ, ದಲ್ಲಿ

Downloaded From www.icseboard.org

(viii) "________ ಉದಾಸೀನವೆ ಮದ್ದು" – ಈ ಗಾದೆ ಮಾತನು–ಪೂರ್ಣಗೊಳಿಸಿ.

(a) ಆತುರಗಾರನಿಗೆ

(b) ಉದಾಸೀನಕ್ಕೆ

(c) ವಿನಯಕ್ಕೆ

(d) ಅಂಹಕಾರಕ್ಕೆ

## SECTION—B (40 Marks)

*Questions from only **two** of the following textbooks are to be answered.*

*Attempt **four** questions from this section.*

*You must answer at least **one** question from each of the **two** books you have studied and **any two** other questions from the same books that you have chosen.*

### ಸಾಹಿತ್ಯ ಸಂಗಮ – ಸಣ್ಣ ಕಥೆಗಳು
### SAHITYA SANGAMA – SHORT STORIES

**Question 5**

Read the extract given below and answer in **Kannada** the questions that follow :—
ಕೆಳಗೆ ಕೊಟ್ಟಿರುವ ಗದ್ಯಭಾಗವನು–ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

ಯಾವುದೋ ಹೊತ್ತಿನಲ್ಲಿ ಎಚ್ಚರವಾಯಿತು. ಏನೋ ಸುಟ್ಟ ವಾಸನೆ ಬಂತು. ತಾಯಿ ಮಲಗಿದ್ದ ಕೊಠಡೀಲಿ ಬೆಂಕಿ ಬಿದ್ದುದು ಕಾಣಿಸಿತು. 'ಅಯ್ಯೋ ಬೆಂಕಿ!'ಅಂತ ಕೂಗಿಕೊಂಡವನೇ, ತನ–ಪುಸ್ತಕಗಳನು–ಬಾಚಿಕೊಂಡು ಬೀದಿಗೆ ಓಡಿದ.

ಟೊಳ್ಳು – ಗಟ್ಟಿ – ಕೈಲಾಸಂ
Tollu – Gatti – Kailasam

ಪ್ರಶೆಗಳು:–

(i) ಹಿರಿಯಣ್ಣಯ್ಯನ ಮಕ್ಕಳ ಹೆಸರೇನು ? ಲೇಖಕರು ಯಾರನ–ಪುಸ್ತಕದ ಪಿಶಾಚಿ ಎಂದು ಕರೆದಿದ್ದಾರೆ? ಯಾಕೆ ? [2]

(ii) ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಫೇಲಾಗಿದ್ದು ಯಾರು ? ತಂದೆ ಅವನಿಗೆ ನೀಡಿದ ಶಿಕ್ಷೆ ಏನು ? [2]

(iii) 'ಅಯ್ಯೋ ಬೆಂಕಿ' ಈ ಮಾತನು–ಯಾರು ಯಾರಿಗೆ ಹೇಳಿದರು ? ಸಂದರ್ಭದೊಡನೆ ವಿವರಿಸಿ. [3]

(iv) ಮನೆಗೆ ಬೆಂಕಿ ಬಿದ್ದಾಗ ಎಲ್ಲರನು–ಕಾಪಾಡಿದವರು ಯಾರು ? ಹೇಗೆ ? [3]

Downloaded From www.icseboard.org

## Question 6

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನು-ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

"ಒಂದೀಟು ಜಾಗ ಬಿಡಿ, ಅಯ್ಯ! ಮಳೇಲಿ ನೆಂದು ಬಂದೀವಿ, ಒಂದೀಟು ಚಳಿ ಕಾಸ್ಗೊಂಡು ಹೋಗ್ತೀವಿ".

ಕಥೆಗಾರ ಮಂಜಣ್ಣ — ಕುವೆಂಪು

Kathegaara Manjanna – Kuvempu

ಪ್ರಶೆಗಳು:–

(i) ಮಂಜಣ್ಣ ಮಕ್ಕಳನು-ಹೇಗೆ ಪೀಡಿಸುತ್ತಿದ್ದ ? [2]

(ii) ಮಕ್ಕಳು ಯಾವ ಸಂದರ್ಭದಲ್ಲಿ ಮುಗ್ಧ ಕುಸುಮಗಳಂತೆ ನಟಿಸಿದರು ? ಏಕೆ ? [2]

(iii) ಮಂಜಣ್ಣನ ದೈನಂದಿನ ಕರ್ಮಾಚರಣೆಗಳು ಹೇಗಿದ್ದವು ? ವಿವರಿಸಿ. [3]

(iv) ಕಥಾಸರಿತ್ಸಾಗರ ಎಂದು ಯಾರನು-ಕರೆಯಲಾಗಿದೆ ? ಏಕೆ ? [3]

## Question 7

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನು-ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

ಗಾಂಧೀಜಿಯವರು ಮೈಸೂರು ಸಂಸ್ಥಾನಕ್ಕೆ ಬಂದಿರುವ ಸುದ್ದಿ ತಿಳಿದ ಲಿಂಗಣ್ಣನವರು ಗಾಂಧಿಯವರಿಗೆ ಪರಿಚಯವಿದ್ದ ಮತ್ತು ತಮ್ಮ ಕಾನೂನು ಸಲಹೆಗಾರರಾದ ಕಲ್ಲೂರು ಸುಬ್ಬರಾಯರ ಮೂಲಕ ಗಾಂಧೀಜಿಯವರನು-ಭೇಟಿ ಮಾಡಲು …………ಬಂದಿದ್ದರು.

ಸೇವಾಶ್ರಮದ ಲಿಂಗಣ್ಣ – ಬೆಳಗೆರೆ ಕೃಷ್ಣಶಾಸ್ತ್ರಿ

Sevaashramada Lingnna – Belagere Krishna Shastri

ಪ್ರಶೆಗಳು:–

(i) ಗಾಂಧೀಜಿಯವರು ಬಿಡಾರ ಹೂಡಿದ್ದು ಎಲ್ಲಿ ? ಅಲ್ಲಿಗೆ ಅವರನು– ನೋಡಲು ಯಾರು ಯಾರು ಬರುತ್ತಿದ್ದರು ? [2]

(ii) ಲಿಂಗಣ್ಣನವರ ಕಂಬಳಿ ಕಾರ್ಖಾನೆ ಎಲ್ಲಿತ್ತು ? ಅವರ ವ್ಯಾಪಾರ ಕೇಂದ್ರವು ಎಲ್ಲಿಯವರಗೆ ವ್ಯಾಪಿಸಿತ್ತು? [2]

(iii) ಗಾಂಧೀಜಿಯವರಿಗಿದ್ದ ಸಮಯಪ್ರಜ್ಞೆ ಎಂಥದ್ದು ? ತಿಳಿಸಿ. [3]

(iv) ಲಿಂಗಣ್ಣನವರು ತಾವೇ ಸ್ಥಾಪಿಸಿದ ಸೇವಾಶ್ರಮದಲ್ಲಿ ಒಂದು ದಿನ ಊಟ ಮಾಡದೆ ಇರಲು ಕಾರಣವೇನು ? [3]

Downloaded From www.icseboard.org

ಸಾಹಿತ್ಯ ಸಂಗಮ — ಕವನಗಳು

**SAHITYA SANGAMA – POEMS**

**Question 8**

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಪದ್ಯಭಾಗವನು-ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

ಲೋಕದೊಳೇನೇ ನಡೆಯುತಲಿರಲಿ, ತನಿಕಾರ್ಯವ ಬಿಡನೆಂದೂ :

ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ, ಹಾರಲಿ ಗದ್ದುಗೆ ಮಕುಟಗಳು,

ಮುತ್ತಿಗೆ ಹಾಕಲಿ ಸೈನಿಕರೆಲ್ಲ, ಬಿತ್ತುಳುವುದನವ ಬಿಡುವುದೆ ಇಲ್ಲ.

ನೇಗಿಲ ಯೋಗಿ—ಕುವೆಂಪು

Negila Yogi – Kuvempu

ಪ್ರಶೆಗಳು:–

(i) 'ಕುವೆಂಪು' ರವರ ಪೂರ್ಣ ಹೆಸರೇನು ? ಅವರ ಕಾಲ, ಸ್ಥಳ, ಕೃತಿ ಹಾಗೂ ಅವರಿಗೆ ದೊರೆತಿರುವ ಪ್ರಶಸ್ತಿಗಳು ಯಾವುವು ? [2]

(ii) ರೈತನು ಹೇಗೆ ದುಡಿಯುವನು ? ಯಾವುದು ರೈತನಿಗೆ ಇಹಪರ ಸಾಧನವಾಗಿದೆ ? [2]

(iii) ಲೋಕದೊಳೇನೇ ನಡೆದರೂ ರೈತ ಏನು ಮಾಡುತ್ತಿರುವನು ? ಏಕೆ ? [3]

(iv) ನಮ್ಮ ಸಂಸ್ಕೃತಿ ಬೆಳೆದು ಸಾಗುವಲ್ಲಿ ರೈತನ ಪಾತ್ರವೇನು ? ವಿವರಿಸಿ. [3]

**Question 9**

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಪದ್ಯಭಾಗವನು-ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

ಕಣ್ಣೀರಿಡುತಾ ರಕ್ಷಣೆ ಕೋರಿದ।
ಛತ್ರಪತಿಯ ಮಗ ರಾಜಾರಾಮ॥
ಮೊಘಲನ ವೈರವ ಸಾಧಿಸಿ ಕಾದಳು।
ಧೈರ್ಯದಿ ಅವನನು ಚೆನಮ್ಮ॥

ಕೆಳದಿಯ ಅರಸರ ಕಥೆ – ಲಾವಣಿ

Keladi Arasara Kathe – Lavani

ಪ್ರಶೆಗಳು:–

(i) ಕೆಳದಿಯ ಸಂಸ್ಥಾನವನು– ಸ್ಥಾಪಿಸಿದವರು ಯಾರು? ಶಿವಪ್ಪನಾಯಕ ಯಾವ ವಿಷಯದಲ್ಲಿ ಶಿಸ್ತನು ತಂದನು ? [2]

(ii) ರಾಜರಾಮನು ಯಾರ ರಕ್ಷಣೆ ಕೋರಿ ಬಂದನು ? ಕೆಳದಿಯ ಸಾಮ್ರಾಜ್ಯದ ಸಿರಿ ಹೇಗೆ ನಂದಿತು ? [2]

(iii) ಕವಿ ಯಾರ ಕಥೆಯನು—ಈ ಲಾವಣಿಯಲ್ಲಿ ಹೇಳುತ್ತಾರೆ ? ಅವರು ಯಾವುದಕ್ಕೆ ಪ್ರಸಿದ್ಧರಾಗಿದ್ದರು ? [3]

(iv) ಲಾವಣಿ ಎಂದರೆ ಹೇಗಿರಬೇಕು ? [3]

Downloaded From www.icseboard.org

**Question 10**

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಪದ್ಯಭಾಗವನು-ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

ಅಸ್ಥಿರದ ದೇಹವನು ನೆಚ್ಚಿ ನೀ ಕೆಡಬೇಡ
ಸ್ವಸ್ಥದಲಿ ನೆನೆ ಕಂಡ್ಯ ಪರಮಾತ್ಮನ
ಚಿತ್ತದೊಳು ಶುದ್ಧಿಯಿಂ ಪುರಂದರವಿಠಲನೇ
ಉತ್ತಮೋತ್ತಮನೆಂದು ಸುಖಿಯಾಗು ಮನುಜಾ

ಆರು ಹಿತವರು ನಿನಗೆ – ಪುರಂದರದಾಸರು

Aaru Hitavaru Ninage – Purandaradaasaru

ಪ್ರಶೆಗಳು:–

(i) ಮಾನವ ಸುಖವಾಗಿ ಬಾಳುವುದು ಹೇಗೆ ಎಂದು ಪುರಂದರದಾಸರು ಹೇಳಿದ್ದಾರೆ ? [2]

(ii) ಪುರಂದರದಾಸರ ಗುರುಗಳು ಯಾರು ? ಅವರು ದಾಸರನು-ಏನೆಂದು ಹೊಗಳಿದ್ದಾರೆ ? [2]

(iii) ಮಾನವ ಹಣವನು–ಯಾವ ರೀತಿ ಸಂಪಾದಿಸುತ್ತಾನೆ ? ಅದು ಕೊನೆಗೆ ಏನಾಗುತ್ತದೆ ? [3]

(iv) ಸತ್ತ ನಂತರವೂ ನಮ್ಮ ಹೆಸರು ಉಳಿಯಬೇಕಾದರೆ ಏನು ಮಾಡಬೇಕೆಂದು ದಾಸರು ಹೇಳಿದ್ದಾರೆ ? ವಿವರಿಸಿ. [3]

ಕಾದಂಬರಿ – ನಾಟ್ಯ ಮಯೂರಿ

ಶ್ರೀ ಸಾ. ಶಿ. ಮರುಳಯ್ಯ

**NOVEL – NATYA MAYURI**

**SHRI SA. SHI. MARULAYYA**

**Question 11**

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನು-ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

ಜನರೆಲ್ಲಾ ಒಬ್ಬೊಬ್ಬರಾಗಿ ಸರಿದರು, ಶಾಂತಲೆ ಮಾತ್ರ ಗೋಡೆಯ ಮೇಲೆ ಬರೆದ ಚಿತ್ರದಂತೆ ನಿಂತಿದ್ದಳು. ಅವಳಿಗೆ ಕುದುರೆಗಳಾಗಲಿ, ಅವುಗಳೆಬ್ಬಿಸಿದ ಧೂಳಿಯಾಗಲಿ ಕಾಣಿಸುತ್ತಿರಲಿಲ್ಲ. ಆ ಧೂಳಿನ ಮಧ್ಯದಲ್ಲಿ ವಿರಾಜಮಾನವಾಗಿ ಬೆಳಗುತ್ತಿದ್ದ ಮಹಾಮೂರ್ತಿಯೊಂದು ಗೋಚರಿಸುತ್ತಿತ್ತು.

ಪ್ರಶೆಗಳು:–

(i) ಶಾಂತಲೆಯ ಮನದಲ್ಲಿ ವಿರಾಜಮಾನವಾಗಿ ಬೆಳಗುತ್ತಿದ್ದ ಮಹಾಮೂರ್ತಿ ಯಾರು ? ಅದನು–ಅವಳು ಹೇಗೆ ನೋಡುತ್ತಿದ್ದಳು ? [2]

(ii) ವಿಷ್ಣುವರ್ಧನನಿಗೆ ಯಾವ ಯಾವ ಲಲಿತ ಕಲೆಗಳಲ್ಲಿ ಹೆಚ್ಚಿನ ಆಸಕ್ತಿ ಇತ್ತು ? ಹೆಂಜೇರು ಯುದ್ಧದ ಗೆಲುವಿನಲ್ಲಿ ಅವರ ಪಾತ್ರ ಕುರಿತು ಬರೆಯಿರಿ. [2]

(iii) ಶಾಂತಲೆಗೆ ದ್ವಾರಸಮುದ್ರದ ಹೊಯ್ಸಳ ಇತಿಹಾಸವನು–ತಿಳಿಸಿದವರು ಯಾರು ? ವಿವರಿಸಿ. [3]

(iv) ''ಅದರ ಅಗತ್ಯವಿಲ್ಲ...'' ಸಂದರ್ಭ ಸಹಿತ ವಿವರಿಸಿ. [3]



Downloaded From www.icseboard.org

## Question 12

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನು–ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

ಹಮ್ಮಿಕೊಂಡ ಕಾರ್ಯವನು–ಆಗುಮಾಡಲು ಹೊಯ್ಸಳ ಸಾಮ್ರಾಜ್ಯ ಸಿದ್ಧವಾಗಿತ್ತು. ದೇಶವಿದೇಶಗಳ ಎಲ್ಲ ದಾರಿಗಳೂ ಹೊಯ್ಸಳ ರಾಜಧಾನಿಯ ಕಡೆಗೇ ಬರುತ್ತಿದ್ದವು. ದ್ವಾರಸಮುದ್ರ ಅಂದು ಜನಜಂಗುಳಿಯಿಂದ ಕಿಕ್ಕಿರಿದು ಹೋಗಿತ್ತು. ತನಷು–ತಾನೇ ಅಲಂಕರಿಸಿಕೊಂಡು ಕಂಗೊಳಿಸುತ್ತಿತ್ತು.

ಪ್ರಶೆಗಳು:–

(i) ಪಟ್ಟಾಭಿಷೇಕಕ್ಕಾಗಿ ಯಾವ ಯಾವ ನದಿಗಳ ನೀರನು–ತರಿಸಲಾಗಿತ್ತು ? [2]

(ii) ವಿಷ್ಣುವರ್ಧನರ ವಿವಾಹ, ಪಟ್ಟಾಭಿಷೇಕ ಇತ್ಯಾದಿ ಸಮಾರಂಭಕ್ಕೆ ಆಗಮಿಸಿದ ಅತಿಥಿಗಳು ಮತ್ತು ಕಲಾವಿದರನು–ಹೆಸರಿಸಿ. [2]

(iii) ಸಂಭ್ರಮದ ಮೂರನೆಯ ದಿನ ನಡೆದ ಕಾರ್ಯಕ್ರಮವನು–ವಿವರಿಸಿ. [3]

(iv) ರಾಜ ಪುರೋಹಿತರು ವರನಿಂದ ಹೇಳಿಸಿದ ಮಂತ್ರ ಯಾವುದು ? [3]

## Question 13

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನು–ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

"ಅಯ್ಯಯ್ಯೋ... ಮರೆತುಬಿಡುವುದು ಸುಲಭವೇ ಶಾಂತಿ...! ಏಳೇಳು ಜನ್ಮಗಳು ತಪಸ್ಸನಾಚರಿಸಿದರೂ ನಿನಂತಹ ಅಮೂಲ್ಯ ಸ್ತ್ರೀರತ–ದೊರಕಲಾರದು ಚಿಣ್ಣೀ...! ನೀನು ನನಗೆ ಪತಿಯಾಗಿದ್ದೆ... ತಾಯಿಯಾಗಿದ್ದೆ... ಇಂದು ನಾನು ಅನಾಥ... ತಬ್ಬಲಿ...!"

ಪ್ರಶೆಗಳು:–

(i) ಉದಯಾದಿತ್ಯನ ಪುತ್ರ ಯಾರು ? ಅವನ ಹುಟ್ಟು ಹಬ್ಬದ ದಿನ ನಡೆದ ಘೋರ ಘಟನೆ ವಿವರಿಸಿ. [2]

(ii) ಯಾವುದು ನಿಜವಾದ ಜೀವನ ? ಕವಿ ನಾಗಚಂದ್ರರ ಯಾವ ಮಾತುಗಳು ಶಾಂತಲೆಯ ಮನದಲ್ಲಿ ಭದ್ರವಾಗಿ ಬೇರೂರಿದವು ? [2]

(iii) ದುಃಖದಲ್ಲಿ ಮುಳುಗಿದ್ದ ಶಾಂತಲೆಯನು– ವಿಷ್ಣುವರ್ಧನನು ಹೇಗೆ ಸಮಾಧಾನ ಪಡಿಸಲು ಪ್ರಯತಿಸಿದನು? [3]

(iv) ''...ತಮ್ಮನು–ಪತಿಯಾಗಿ ಪಡೆದ ನನಂತಹ ಭಾಗ್ಯಶಾಲಿ ಯಾರು ಇಲ್ಲ..." ಸಂದರ್ಭ ಸಹಿತ ವಿವರಿಸಿ. [3]

Downloaded From www.icseboard.org

ನಾಟಕ – ಹೂವಿ

ಹೆಚ್.ಎಸ್. ವೆಂಕಟೇಶ್ ಮೂರ್ತಿ

## DRAMA – HOOVI

### H. S. Venkatesh Murthy

**Question 14**

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನು–ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

ಗೌಡರ ಮಗ ಊರು ತುಂಬ ಡಂಗೂರ ಹೊಯ್ಸಿದಾನೆ... ಯಾವುದೋ ಹೂವಂತೆ! ಆ ಹೂ ತಂದು ಕೊಟ್ಟೋರಿಗೆ ಹೂವಿಗೆ ಹತ್ತು ಹೊನು–ಕೊಡ್ತಾನಂತೆ.........

ಪ್ರಶೆಗಳು:–

(i) ಗುಡಿಸಲ ಮುಂದೆ ಕವಡೆ ಆಡುತ್ತಿದ್ದವರು ಯಾರು ? ಪುಟ್ಟಕ್ಕ ಅಲ್ಲಿಗೆ ಓಡಿ ಬರಲು ಕಾರಣವೇನು ? [2]

(ii) ಪುಟ್ಟಿಯು ಹೂವಿನ ಗಿಡ ಇರುವ ಜಾಗವನು–ಊಹಿಸಿದ್ದು ಹೇಗೆ ? [2]

(iii) ಪುಟ್ಟಿಗೆ ತನ–ತಾಯಿಯ ಮೇಲಿದ್ದ ಪ್ರೀತಿಯ ಬಗ್ಗೆ ತಿಳಿಸಿ. [3]

(iv) ಪುಟ್ಟಿಯು ಹೂವನು–ಹುಡುಕಿಕೊಂಡು ಎಲ್ಲಿಗೆ ಹೊರಟಳು ? ಅದಕ್ಕೆ ಹೂವಿಯ ಪ್ರತಿಕ್ರಿಯೆ ಏನು? [3]

**Question 15**

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನು–ಓದಿ, ಅನಂತರ ಕೇಳಲಾದ ಪ್ರಶೆಗಳಿಗೆ ಕನಡದಲ್ಲಿ ಉತ್ತರಿಸಿ :—

''ಇವತ್ತು ಮನೆಗೆಲ್ಸದ ಹುಡುಗೀರು ಬಂದಿಲ್ವಾ ಅಂತ ಕೇಳ್ದೆ...''

ಪ್ರಶೆಗಳು:–

(i) ಈ ರೀತಿ ಮೇಲಿನಂತೆ ಯಾರು ಯಾರಿಗೆ ಕೇಳಿದರು ? ಏಕೆ ? ತಿಳಿಸಿ. [2]

(ii) ಗಾಯವಾಗಿರುವ ನಿನ–ಕೈಯನು–ಹೊನಣ್ಣನಿಗೆ ತೋರಿಸು ಮದ್ದು ಮಾಡಿಸುತ್ತಾನೆ ಎಂದಾಗ, ಬೆಳ್ಳಿಯ ಉತ್ತರವೇನು ? [2]

(iii) ಬೆಳ್ಳಿಯು ತನ–ಅಣ್ಣನ ಮೇಲೆ ಕೋಪಗೊಳ್ಳಲು ಕಾರಣವೇನು ? ವಿವರಿಸಿ. [3]

(iv) ಬೆಳ್ಳಿಯು ತನ–ಅತ್ತಿಗೆಯ ಮೇಲೆ ಹಿಕ್ಮತ್ತು ತೋರಿಸಬೇಕೆಂದು ನಿರ್ಧರಿಸಿದ್ದೇಕೆ ? ತಿಳಿಸಿ. [3]



Downloaded From www.icseboard.org

**Question 16**

Read the extract given below and answer in **Kannada** the questions that follow :—

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು-ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ :—

ದಿನಾ ತರೋ ಹೂವು, ದಿನಾನೂ ತರೋಕ್ಕಾಗತ್ತಾ ? ಅಂತಿಂಥ ಹೂವಲ್ಲ ಇದು...! ಮೆಲ್ಲಗೆ ಬೀಸೋ ಗಾಳೀ ಬೆನೇಲಿ ಎಲ್ಲಿಗೆ ಅಂದ್ರೆ ಅಲ್ಲಿಗೆ ಸವ್ವಾರಿ ಮಾಡೋ ಸುರಲೋಕದ ಸುರಹೊನ್ನೆ-ಇದು! ಹೊನ್ನೆ-ಮರದ ತೋಪಲ್ಲಿ ನಿನ್ನ-ಕಣ್ಣು ಸೆಳೆದ ಹೂವು !

ಪ್ರಶ್ನೆಗಳು:-

(i) ಬುಟ್ಟಿ ತುಂಬಾ ಹೂ ತುಂಬಿಕೊಂಡು ಹಾಡುತ್ತಾ ಪುಟ್ಟಿ ಎಲ್ಲಿಗೆ ಹೊರಟಳು ? ಬುಟ್ಟಿಯಲ್ಲಿರುವ ಹೂವನ್ನು-ಕುರಿತು ಏನೆಂದು ಹೇಳಿದಳು ? [2]

(ii) ಹೂ ನೋಡಿದ ಮೇಲೆ ಹೊನ್ನನ ಪ್ರತಿಕ್ರಿಯೆ ಏನು ? ವಿವರಿಸಿ. [2]

(iii) ಅಣ್ಣಾ... ಅಣ್ಣಾ... ಎಂಥಾ ದಿವಿನಾದ ಹೂವು ! ಇಂಥಾ ಪರಮಾಶಿ ಹೂ ಕಂಡು ಮರುಳಾಗದೆ ಇರೋದಾದ್ರು ಹೇಗೆ ? ಯಾರು ಯಾರಿಗೆ ಹೇಳಿದರು ? ಸಂದರ್ಭದೊಡನೆ ವಿವರಿಸಿ. [3]

(iv) ಸಾವಿರ ಹೊನ್ನು-ಕೊಡುತೀನಿ ಹೂ ಬಿಡುವ ಮರ ತೋರಿಸು ಎಂದಿದ್ದಕ್ಕೆ ಪುಟ್ಟಿ ಹೊನ್ನನಿಗೆ ಏನೆಂದು ಉತ್ತರಿಸಿದಳು ? ವಿವರಿಸಿ. [3]

Downloaded From www.icseboard.org